ಸುವರ್ಣ ಭೂಮಿ ಯೋಜನೆ

4 (35) ಶ್ರೀ ನಾಡಗೌಡ ವೆಂಕಟರಾವ್ : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) 2011–12ರ ಆಯವ್ಯಯದಲ್ಲಿ ಸುವರ್ಣ ಭೂಮಿ ಯೋಜನೆಗೆ ಮೀಸಲಿರಿಸಿದ್ದ ಅನುದಾನದ ಮೊತ್ತವೆಷ್ಟು;

ಆ) ಸರ್ಕಾರ ಮೀಸಲಿರಿಸಿದ್ದ ಅನುದಾನದಲ್ಲಿ ಇದುವರೆವಿಗೂ ಬಿಡುಗಡೆ ಮಾಡಿರುವ ಅನುದಾನ ಮೊತ್ತವೆಷ್ಟು;

ಇ) ಹಾಗಿದ್ದಲ್ಲಿ, ಇದುವರೆವಿಗೂ ಬಿಡುಗಡೆಯಾದ ಅನುದಾನದಲ್ಲಿ ವೆಚ್ಚವಾಗಿರುವ ಹಾಗೂ ವೆಚ್ಚವಾಗದೇ ಉಳಿದಿರುವ ಅನುದಾನದ ಮೊತ್ತವೆಷ್ಟು;

ಈ) ಹಾಗಿಲ್ಲದಿದ್ದಲ್ಲಿ, ಸರ್ಕಾರ ಮೀಸಲಿರಿಸಿದ್ದ ಅನುದಾನವನ್ನು ಇದುವರೆವಿಗೂ ಬಿಡುಗಡೆ ಮಾಡದೇ ಇರಲು ಕಾರಣಗಳೇನು? (ವಿವರ ಒದಗಿಸುವುದು);

ಶ್ರೀ ಉಮೇಶ್ ವಿ. ಕತ್ತಿ (ಕೃಷಿ ಸಚಿವರು) :

ಅ) 2011–12ರ ಆಯವ್ಯಯದಲ್ಲಿ ಸುವರ್ಣ ಭೂಮಿ ಯೋಜನೆಗೆ ವಿವಿಧ ಚಟುವಟಿಕೆಗಳಡಿ ಮೀಸಲಿರಿಸಿದ್ದ ಅನುದಾನ ರೂ.1000.00 ಕೋಟಿಗಳು. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಸರ್ಕಾರ ಮೀಸಲಿರಿಸಿದ್ದ ಅನುದಾನದಲ್ಲಿ ಇದುವರೆವಿಗೂ ಬಿಡುಗಡೆ ಮಾಡಿರುವ ಅನುದಾನದ ಮೊತ್ತ ರೂ. 569.9393 ಕೋಟಿಗಳು.

ಇ) ಇದುವರೆವಿಗೂ ಬಿಡುಗಡೆಯಾದ ಅನುದಾನದಲ್ಲಿ ವೆಚ್ಚವಾಗಿರುವ ಅನುದಾನ ರೂ.427.11 ಕೋಟಿಗಳು. ವೆಚ್ಚವಾಗದೇ ಉಳಿದಿರುವ ಅನುದಾನ ರೂ.91.80 ಕೋಟಿಗಳು.

ಈ) ಕೃಷಿ ಚಟುವಟಿಕೆಗಳಿಗೆ ಅವಶ್ಯಕತೆ ಇರುವ ಎರಡನೇ ಕಂತಿನ ಸಹಾಯಧನ ವಿತರಿಸಲು ರೂ.29.00 ಕೋಟಿ ಹಾಗೂ ಸಾವಯವ ಕೃಷಿ ಘಟಕಕ್ಕೆ ರೂ.22.00 ಕೋಟಿ ಸರ್ಕಾರದಿಂದ ದಿ: 27–03–2012 ರಂದು ಬಿಡುಗಡೆ ಆಗಿರುತ್ತದೆ. ಉಳಿದ ಚಟುವಟಿಕೆಗಳಿಗೆ ನಿಗದಿತ ಗುರಿಗಿಂತ ಕಡಿಮೆ ಅರ್ಜಿಗಳು ಸ್ವೀಕೃತವಾಗಿರುವ ಹಿನ್ನೆಲೆಯಲ್ಲಿ ಬಿಡುಗಡೆ ಮಾಡಲಾದ ಅನುದಾನದಲ್ಲಿ ರೂ.91.80 ಕೋಟಿ ರೂ. ಗಳು ಲಭ್ಯವಿರುತ್ತದೆ.

Annexure

ಕ್ರ.ಸಂ	ಚಟುವಟಿಕೆ	ಅನುಮೋದಿತ ಆಯವ್ಯಯ ಮೊತ್ತ (ರೂ.ಲಕ್ಷಗಳಲ್ಲಿ)	ಬಿಡುಗಡೆಯಾದ ಮೊತ್ತ (ರೂ.ಲಕ್ಷಗಳಲ್ಲಿ)	ಸಹಾಯಧನಕ್ಕೆ ಅರ್ಹರಾದ ಫಲಾನುಭವಿಗಳ ಒಟ್ಟು ಸಂಖ್ಯೆ	ಸಹಾಯಧನವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಿರುವ ವಿವರ		ಸಹಾಯಧನವನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಿರುವ ವಿವರ		1 & 2ನೇ ಕಂತಿನ ಒಟ್ಟು ವೆಚ್ಚ (ರೂ.ಲಕ್ಷಗಳಲ್ಲಿ)
Sl. No	Activity	Annual Budget allocated, Rs. in lakhs.	Grants Released (lakh Rs.)	Total No. Beneficiaries found to be eligible for subsidy	Details of 1st Installment Subsidy amount adjusted to Bank Accounts of Beneficiaries.		Details of 2nd Installment Subsidy amount adjusted to Bank Accounts of Beneficiaries.		1st & 2nd installment total expenditure. (lakh Rs.)
					Amount (lakh Rs.)	No.of Farmers	Amount (lakh Rs.)	No.of Farmers	Amount (lakh Rs.)
1	ತೋಟಗಾರಿಕೆ Horticulture	25000.00	17702.00	231466	8201.11	231446	6850.89	55744	15052.00
2	ರೇಷ್ಮೆ Sericulture	9375.00	2350.00	31318	1003.18	31318	148.43	4330	1151.61
3	ಜೈವಿಕ ಇಂಧನ Bio-Fuel	10000.00	2500.00	8733	368.12	8733	163.36	3656	531.48
4	ಸಾವಯವ ಕೃಷಿ Organic Farming	20000.00	7200.00	61024	2562.08	52591	101.67	2085	2663.75
5	ಕೃಷಿ Agriculture	30000.00	25400.00	348670	14193.36	345785	8306.64	165493	22500.00
6	ಜೇನು ಸಾಕಣೆ Apiculture	625.00	625.00	4566	228.30	4566	175.22	2758	403.52
7	ರೇಷ್ಮೆ Fisheries	5000.00	1216.93	6934	346.70	6934	62.30	164	409.00
	ಒಟ್ಟು Total	100000.00	56993.93	692711	26902.85	681373	15808.51	234230	42711.36

ಶ್ರೀ ವೆಂಕಟರಾವ್ ನಾಡಗೌಡ : 2011–12ನೇ ಸಾಲಿನ ಆಯವ್ಯಯದಲ್ಲಿ ಸುವರ್ಣ ಭೂಮಿ ಯೋಜನೆಗೆ ಮೀಸಲಾಗಿರಿಸಿದ್ದ ಅನುದಾನದ ಮೊತ್ತವೆಷ್ಟು ಎಂದು ನಾನು ಕೇಳಿದ್ದೆ ಅವರು ಸಾವಿರ ಕೋಟಿಗಳೆಂದು ಹೇಳಿದ್ದಾರೆ. ಮೀಸಲಿರಿಸಿದ ಅನುದಾನದಲ್ಲಿ ಇದುವರೆಗೆ ಬಿಡುಗಡೆ ಮಾಡಿದ ಅನುದಾನವೆಷ್ಟು ಎಂದು ಕೇಳಿದರೆ 569.93 ಕೋಟಿ ಹಣ ಇದುವರೆಗೆ ಬಿಡುಗಡೆಯಾಗಿದೆ ಎಂದು ಹೇಳುತ್ತಾರೆ. ಇದುವರೆವಿಗೂ ವೆಚ್ಚವಾಗಿರುವುದು 427 ಕೋಟಿ ಎಂದು ಉತ್ತರದಲ್ಲಿ ಹೇಳಿದ್ದಾರೆ. ಹಾಗಿದ್ದಲ್ಲಿ ಸರ್ಕಾರ ಮೀಸಲಿರಿಸಿದ ಅನುದಾನವನ್ನು ಇದುವರೆವಿಗೆ ಬಿಡುಗಡೆ ಮಾಡದಿರಲು ಕಾರಣಗಳೇನು ಎಂದು ಕೇಳಿದ್ದಕ್ಕೆ ಕೃಷಿ ಚಟುವಟಿಕೆಗೆ ಅವಶ್ಯಕವಿರುವ ಎರಡನೇ ಕಂತಿನ ಸಹಾಯಧನ ವಿತರಿಸಲು 29 ಕೋಟಿ ಹಾಗೂ ಸಾವಯವ ಕೃಷಿಗೆ 22 ಕೋಟಿ ಸರ್ಕಾರದದಿಂದ 27.3.2012 ರಂದು ಬಿಡುಗಡೆಯಾಗಿರುತ್ತದೆ. ಉಳಿದ ಚಟುವಟಿಕೆಗಳಿಗೆ ನಿಗದಿತ ಗುರಿಗಿಂತ ಕಡಿಮೆ ಅರ್ಜಿಗಳು ಸ್ವೀಕೃತವಾಗಿರುವ ಹಿನ್ನೆಲೆಯಲ್ಲಿ ಬಿಡುಗಡೆ ಮಾಡಲಾದ ಅನುದಾನದಲ್ಲಿ ರೂ.91 ಕೋಟಿಗಳು ಲಭ್ಯವಿರುತ್ತದೆ. ಆದರೆ ಈ ಯೋಜನೆಯನ್ನು ಏನು ತಂದಿದ್ದರೆ, ಮೊದಲೇ ಕಂತಿನ ರೂ.5000 ಬಿಡುಗಡೆಯಾಗಿದ್ದು ಬಿಟ್ಟರೆ, 2ನೇ ಕಂತಿನ ಅನುದಾನ ಎಲ್ಲೂ ಬಿಡುಗಡೆಯಾಗಿಲ್ಲ, ಅದರಲ್ಲೂ ಒಂದನೇ ಕಂತಿನಲ್ಲಿ ಕಂತುಗಳನ್ನು ಕೊಟ್ಟಿದ್ದಾರೆ, ಕೆಲವರಿಗೆ ಕೊಟ್ಟಿದ್ದಾರೆ, ಕೆಲವರಿಗೆ ಕೊಟ್ಟಿಲ್ಲ. ಏನು ಗೊಂದಲವಾಗಿದೆ ಎಂದರೆ, ನಮ್ಮನ್ನು ಕರೆದುಕೊಂಡು ಹೋಗಿ ಲಾಟರಿ ಎತ್ತಿಸಿದರು, ನಾವೆಲ್ಲಾ ಹೋಗಿ ಲಾಟರಿ ಎತ್ತಿ ಬಂದೆವು, ಈಗ ಅವರು ಬಂದು, ಏನ್ರಿ ನಮ್ಮ ದುಡ್ಡು ಬಂದಿಲ್ಲ ಎಂದು ಕೇಳುತ್ತಾರೆ, ಸಾವಿರ ಕೋಟಿ ಇಟ್ಟು ದುಡ್ಡು ಕೊಟ್ಟಿಲ್ಲವೆಂದರೆ ಏನರ್ಥ? ಸರ್ಕಾರದಲ್ಲಿ ಹಣವಿಲ್ಲವೆಂದು ಹೇಳಬೇಕೊ, ಏಕೆ ಬಿಡುಗಡೆಯಾಗಿಲ್ಲ? ಇಲ್ಲಿ ಸಾವಿರ ಕೋಟಿ ಬಜೆಟ್ ಓದುತ್ತೀರಿ, ಪ್ರಾವಿಷನ್ ಇದ್ದ ಮೇಲೆ ಏತಕ್ಕೆ ಹಣ ಬಂದಿಲ್ಲ? ಪ್ರಾವಿಷನ್ ಮಾಡಿದ್ದು ಬೇರೆಡೆಗೆ ವರ್ಗಾವಣೆಯಾಗಿದೆಯೇ? ನಮಗಿರುವ ಮಾಹಿತಿಯ ಪ್ರಕಾರ ಈ ಸಾವಿರ ಕೋಟಿ ರೂಪಾಯಿಗಳಲ್ಲಿ ಒಂದು ರೂಪಾಯಿಯು ಕೂಡ ರಿಲೀಸ್ ಆಗಿಲ್ಲ. ಇದಕ್ಕೆ ಏನು ಮಾಡಿದ್ದಾರೆಂದರೆ, 150 ಕೋಟಿ ರೂಪಾಯಿಗಳನ್ನು ನಿಮ್ಮ ಸಾವಯವ ಕೃಷಿಯಿಂದ ವರ್ಗಾವಣೆ ಮಾಡಿದ್ದೀರಿ, 50–60 ಕೋಟಿ ರೂಪಾಯಿಗಳನ್ನು ನಿಮ್ಮ Horticulture Department ನಿಂದ ವರ್ಗಾವಣೆ ಮಾಡಿದ್ದರೆ, ಇದರ ಅರ್ಥವೇನು? ಸಾವಿರ ಕೋಟಿ ರೂಪಾಯಿಗಳಿದ್ದರೂ

ಅದನ್ನು ಕೊಟ್ಟಿಲ್ಲ, ಮತ್ತೆ ಈ ವರ್ಷ ಕಂಟಿನ್ಯೂ ಎನ್ನುತ್ತೀರಿ, ನಮಗೆ ಬೇಕಾಗಿರುವುದು ಏನೆಂದರೆ ಇದು ಏತಕ್ಕೆ ಬಿಡುಗಡೆಯಾಗಿಲ್ಲ.

ಶ್ರೀ ಉಮೇಶ್ ವಿ. ಕತ್ತಿ : ಮನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಸುವರ್ಣಭೂಮಿ ಯೋಜನೆಯಡಿಯಲ್ಲಿ ಒಂದು ಸಾವಿರ ಕೋಟಿ ರೂಪಾಯಿ ಗಳನ್ನು ನಿಗದಿ ಮಾಡಿ, ರಾಜ್ಯದ ರೈತರು ಆರ್ಥಿಕ ತೊಂದರೆಯಲ್ಲಿ ಸಿಕ್ಕಿಹಾಕಿ ಕೊಂಡು ಕೃಷಿಯನ್ನು ಬಿಡಬಾರದೆಂದು ಈ ಸುವರ್ಣಭೂಮಿ ಯೋಜನೆ ಯಡಿಯಲ್ಲಿ ಸ್ವಾವಲಂಬನೆಯಿಂದ ಅವರು ಬದುಕಬೇಕು, ಸರ್ಕಾರ ಸ್ವಲ್ಪ ಆರ್ಥಿಕ ಸಹಾಯ ಕೊಡಬೇಕೆನ್ನುವ ದೃಷ್ಟಿಯಿಂದ ಈ ಕಾರ್ಯಕ್ರಮವನ್ನು ರೂಪಿಸಿ ಸಾವಿರ ಕೋಟಿ ರೂಪಾಯಿಗಳನ್ನು ಇದಕ್ಕೆ ತೆಗೆದಿಡಲಾಗಿದೆ. ಇದರಲ್ಲಿ ತೋಟಗಾರಿಕೆ, ರೇಷ್ಮೆ, ಜೈವಿಕ ಕೇಂದ್ರ, ಸಾವಯವ ಕೃಷಿ, ಮೀನುಗಾರಿಕೆ ಒಟ್ಟು 7 ವಲಯಗಳು ಈ ಯೋಜನೆಯಲ್ಲಿ ಬರುತ್ತವೆ. ಅದರಲ್ಲಿ 210 ಕೋಟಿ ರೂಪಾಯಿಗಳು ತೋಟಗಾರಿಕೆ ಇಲಾಖೆಗೆ ಮೀಸಲಾಗಿದೆ, 2,31,464 ಅರ್ಜಿಗಳು ಮಾತ್ರ ಬಂದಿವೆ. ಅದರ ಮೊದಲ ಕಂತಿನ ಹಣ 82 ಕೋಟಿ 11 ಲಕ್ಷ, ಅದನ್ನು ಪೂರ್ಣವಾಗಿ ಬಿಡುಗಡೆ ಮಾಡಲಾಗಿದೆ. 2ನೇ ಕಂತನ್ನು ಬಿಡುಗಡೆ ಮಾಡುವುದಕ್ಕೆ ಮುಂಚೆ, ತೋಟಗಾರಿಕೆ ಬೆಳೆ ಬೆಳೆದಿದ್ದಾನೋ ಇಲ್ಲವೋ ಎಂದು ನೋಡಿ, ಎರಡನೇ ಕಂತನ್ನು ಬಿಡುಗಡೆ ಮಾಡುವಾಗ ಒಟ್ಟು 55,744 ಜನ ತೋಟಗಾರಿಕೆ ಬೆಳೆ ಬೆಳೆಯುತ್ತಿದ್ದಾರೆ ಹಾಗಾಗಿ 68 ಕೋಟಿಗಳನ್ನು ಎರಡನೇ ಕಂತಿನ ಹಣವನ್ನು ಬಿಡುಗಡೆ ಮಾಡಲಾಗಿದೆ, ಒಟ್ಟು 250 ಕೋಟಿಯಲ್ಲಿ 150 ಕೋಟಿ ರೂಪಾಯಿಗಳು ತೋಟಗಾರಿಕೆ ಇಲಾಖೆಯಲ್ಲಿ ಖರ್ಚಾಗಿದೆ. ಹಾಗೆ ರೇಷ್ಮೆ ಬೆಳೆಗೆ 93 ಕೋಟಿ ರೂಪಾಯಿಗಳನ್ನು ಮೀಸಲಿಟ್ಟ ಸಂದರ್ಭದಲ್ಲಿ ಗ್ರಾಂಟ್ ರಿಲೀಸ್ ಆಗಿದ್ದು 23 ಕೋಟಿ 50 ಲಕ್ಷ. ಅಲ್ಲಿ ರೇಷ್ಮೆ ಬಿತ್ತನೆ ಮಾಡುವುದಕ್ಕೆ ಮುಂದೆ ಬಂದಂಥ ರೈತರು 38, 318 ಜನ. ಮೊದಲನೇ ಕಂತಿನ ಹಣ ಒಟ್ಟುಗೂಡಿಸಿದಾಗ 10 ಕೋಟಿ 3 ಲಕ್ಷ ರೂಪಾಯಿ ಮೊದಲನೇ ಕಂತಿನ ಹಣವನ್ನು ಪೂರ್ಣವಾಗಿ ಬಿಡುಗಡೆ ಮಾಡಿದ್ದೇವೆ, 2ನೇ ಕಂತನ್ನು ಬಿಡುಗಡೆ ಮಾಡುವಾಗ ಸರ್ವೇ ಮಾಡಿದಾಗ 31,318 ರೈತರಿದ್ದರು, ಅದರಲ್ಲಿ 4337 ಜನರು ರೇಷ್ಮೆ ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದ ಕಾರಣ 2ನೇ ಕಂತಿನ ಹಣ 1 ಕೋಟಿ 42 ಲಕ್ಷ ಬಿಡುಗಡೆ ಮಾಡಿದ್ದೇವೆ. ಒಟ್ಟು ರೇಷ್ಮೆ ಇಲಾಖೆಗೆ ಮೀಸಲಾಗಿಟ್ಟಿರುವುದು 93 ಕೋಟಿ, ಮೊದಲು ಮತ್ತು 2ನೇ ಕಂತಿನದ್ದು ಒಟ್ಟಿಗೆ ಸೇರಿಸಿ 11 ಕೋಟಿ 51 ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ.

ಈ ರಾಜ್ಯದ ರೈತರಿಗೆ ಅನುಕೂಲವಾಗುವಂತಹ ಯೋಜನೆಗಳಿಗೆ ಪೂರ್ಣ ಪ್ರಮಾಣದ ಅರ್ಜಿ ಬರದೇ ಇರುವುದರಿಂದ ಇವತ್ತು ತೋಟಗಾರಿಕೆ ಆಗಿರಬಹುದು, ರೇಷ್ಮೆ ಆಗಿರಬಹುದು, ಸಾವಯವ ಕೃಷಿ ಆಗಿರಬಹುದು, ಜೈವಿಕ ಇಂಧನ ಆಗಿರಬಹುದು ಈ ರೀತಿ ಎಲ್ಲಾ ಇಲಾಖೆಗಳಲ್ಲಿ ಅರ್ಜಿಗಳು ಕಡಿಮೆ ಬಂದು ಇವತ್ತು ಸರ್ಕಾರಕ್ಕೆ ತೊಂದರೆಯಾಗಿದೆ. ಆದರೆ ಆಯ್ಕೆ ಮಾಡಿದಂತಹ ರೈತರಿಗೆ ಮೊದಲನೇ ಕಂತಿನ ಹಣ ಪೂರ್ಣ ಪ್ರಮಾಣದಲ್ಲಿ ಬಿಡುಗಡೆ ಮಾಡಿದ್ದೇವೆ. ಈಗ ಎರಡನೇ ಕಂತಿನ ಹಣ ಸರ್ವೇ ಮಾಡಿ ಬಿಡುಗಡೆ ಮಾಡಬೇಕಾಗಿತ್ತು. ಅದಕ್ಕೆ ಯಾರು eligible ಇರುತ್ತಾರೋ ಅವರಿಗೆ ಎರಡನೇ ಕಂತಿನ ಹಣವನ್ನೂ ಬಿಡುಗಡೆ ಮಾಡಿದ್ದೇವೆ. ಮಾನ್ಯ ಸದಸ್ಯರು ಇನ್ನೂ ಕೆಲವರಿಗೆ ಹಣ ಬಿಡುಗಡೆ ಮಾಡಿಲ್ಲವೆಂದು ಹೇಳುತ್ತಿದ್ದಾರೆ. ಆ ತಾಲ್ಲೂಕಿಗೆ ಪೂರ್ಣ ಪ್ರಮಾಣದಲ್ಲಿ, ನಮ್ಮ ಪ್ರಕಾರ ಎಲ್ಲಾ ರೈತರು ಇವತ್ತು ಏನು ಆಯ್ಕೆಗೊಂಡಿದ್ದಾರೆ ಅವರೆಲ್ಲರಿಗೂ ಕೊಡುವ ಪ್ರಯತ್ನದಲ್ಲಿ ನಾವು ಹಿಂದೆ ಬಿದ್ದಿಲ್ಲವೆನ್ನುವುದು ನಮ್ಮ ಅನಿಸಿಕೆ. ಆದರೆ ಅದರಲ್ಲಿ ಯಾರಾದರೂ ಉಳಿದಿದ್ದರೆ, ತಾವು ಖಚಿತವಾದ ಮಾಹಿತಿ ಕೊಟ್ಟರೆ, ಅವರಿಗೆ ಕೊಡಿಸುವ ವ್ಯವಸ್ಥೆ ಮಾಡುತ್ತೇನೆ. ನಮ್ಮ ಕಡೆ ದುಡ್ಡಿಗೆ ಇದೆ. ದುಡ್ಡಿಗೆ ಯಾವುದೇ ರೀತಿಯ ಕೊರತೆ ಇಲ್ಲ. ಈ ಯೋಜನೆಯಲ್ಲಿ ಯಾರಿಗಾದರೂ ತೊಂದರೆಯಾಗಿದ್ದರೆ, ಅದರ ಬಗ್ಗೆ ಮಾಹಿತಿ ಕೊಟ್ಟರೆ ಅದಕ್ಕೆ ಪೂರಕವಾದಂತಹ ವ್ಯವಸ್ಥೆ ಮಾಡುತ್ತೇನೆ.

ಶ್ರೀ ವೆಂಕಟರಾವ್ ನಾಡಗೌಡ : ನನ್ನ ಕ್ಷೇತ್ರದಲ್ಲಿ ಯಾವುದೇ ರೇಷ್ಮೆ ಇಲ್ಲ, ತೋಟಗಾರಿಕೆ ಇಲ್ಲ, ಜೈವಿಕ ಇಂಧನ ಬರುವುದಿಲ್ಲ. ಅವುಗಳನ್ನು ಬೆಳೆಯುವುದೇ ಇಲ್ಲ ಅವುಗಳ ಬಗ್ಗೆ ಹೇಳಿದರು. ನನ್ನ ಕ್ಷೇತ್ರದಲ್ಲಿ ಕೃಷಿ, ಕೃಷಿಗೆ ಮಾಡಿರುವಂಥದ್ದೇ ಎರಡನೇ ಕಂತಿನ ಹಣ ಬಿಡುಗಡೆ ಆಗಿಲ್ಲ. ಅವರಿಗೆ ಅರ್ಜಿ ಬಂದಿಲ್ಲ ಅವರು ಕೊಟ್ಟಿಲ್ಲ. All right. ಆದರೆ ನಮಗೆ ಅರ್ಜಿ ಬಂದು ಎಲ್ಲಾ ಕೊಟ್ಟು ಮೊದಲನೇ ಕಂತಿನ ಹಣ ಕೊಟ್ಟವರಿಗೆ ಎರಡನೇ ಕಂತಿನ ಹಣ ಕೊಟ್ಟಿಲ್ಲ. ಅವರು ಹೇಳಿದ್ದು ನಮ್ಮ ಕ್ಷೇತ್ರಕ್ಕೆ ಯಾವುದೂ ಅನ್ವಯಿಸುವುದಿಲ್ಲ. ನನ್ನ ಕ್ಷೇತ್ರದಲ್ಲಿ ತೋಟಗಾರಿಕೆ ಇಲ್ಲ, ರೇಷ್ಮೆ ಇಲ್ಲ ಯಾವುದೂ ಇಲ್ಲ. ಅಂಥವುಗಳಿಗೆ ಕಂತಿನ ದುಡ್ಡು ಕೊಟ್ಟಿಲ್ಲವಲ್ಲ, ದುಡ್ಡು ಇದೆಯೋ ಇಲ್ಲವೋ ಎಂದು ಕೇಳುತ್ತಿದ್ದೇನೆ.

ಶ್ರೀ ಉಮೇಶ್ ವಿ. ಕತ್ತಿ : ಮಾನ್ಯ ಸದಸ್ಯರು ಕೇಳಿದ ಪ್ರಶ್ನೆ ರಾಜ್ಯದ ಬಗ್ಗೆ, ರಾಜ್ಯದ ಬಗ್ಗೆಯೇ ಮಾಹಿತಿ ಕೊಡುತ್ತಿದ್ದೇನೆ. ವೈಯಕ್ತಿಕವಾಗಿ ಅವರ ಕ್ಷೇತ್ರದ್ದು, ತಾಲ್ಲೂಕು ಎಂದು ಕೇಳಿದ್ದರೆ ಅದರ ಬಗ್ಗೆ ಮಾಹಿತಿ ಕೊಡುತ್ತೇನೆ.

ಶ್ರೀ ವೆಂಕಟರಾವ್ ನಾಡಗೌಡ : ದುಡ್ಡು ಇದೆ ಎಂದು ಹೇಳುತ್ತಾರೆ ನಾನು ರಾಜ್ಯದ್ದು ಕೇಳಿದ್ದೇನೆ.

ಶ್ರೀ ಉಮೇಶ್ ವಿ. ಕತ್ತಿ : ಒಂದು ನಿಮಿಷ ಮಾನ್ಯ ಅಧ್ಯಕ್ಷರೆ ಉತ್ತರ ಕೊಡುತ್ತಿದ್ದೇನೆ. ಕೃಷಿಯಲ್ಲಿ 3 ಲಕ್ಷ ಫಲಾನುಭವಿಗಳು ಆಯ್ಕೆ ಮಾಡಬೇಕಾಗಿತ್ತು. ಅದಕ್ಕಾಗಿ 300 ಕೋಟಿ ರೂಪಾಯಿಗಳನ್ನು ತೆಗೆದಿರಿಸಲಾಗಿದೆ. ಅದರಲ್ಲಿ 3,48,670 ಅರ್ಜಿಗಳು ಬಂದಿವೆ. ಮೊದಲನೆಯ ಕಂತಿನ ಹಣ 141 ಕೋಟಿ ರೂಪಾಯಿಗಳನ್ನು ಕೃಷಿ ಇಲಾಖೆಯಿಂದ ಬಿಡುಗಡೆ ಮಾಡಿ ಮೊದಲನೇ ಕಂತಿನ ಹಣವನ್ನು ಎಲ್ಲರಿಗೂ ಕೊಡುವಂತಹ ಪ್ರಯತ್ನದಲ್ಲಿ ನಾವು ಯಶಸ್ವಿಗೊಂಡಿದ್ದೇವೆ. ಆದರೆ ಎರಡನೇ ಕಂತಿನ ಹಣ, ಸರ್ವೇ ಮಾಡಿದಾಗ, ಇವತ್ತು ಏನು ಕೃಷಿಯಲ್ಲಿ 3 ಕೋಟಿ 48 ಲಕ್ಷ ಜನ ಆಯ್ಕೆಯಾಗಿದ್ದರು, ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದವರು. ಅವರು ಹೇಳುವಂಥದ್ದು ಬೇರೆ ಬಿತ್ತಿದವರು 1 ಲಕ್ಷ 68 ಸಾವಿರ ಜನ ಮಾತ್ರ ಏನು ಬೇರೆ ಬಿತ್ತಿದ್ದಾರೆ, ಎರಡನೇ ಕಂತಿಗೆ . . .

ಅಧ್ಯಕ್ಷರು : ಮಾನ್ಯ ಉಮೇಶ್ ಕತ್ತಿಯವರೆ, ಅವರ ಕ್ಷೇತ್ರದ್ದು ಮಾಹಿತಿ ಕೊಡಿ.

ಶ್ರೀ ಉಮೇಶ್ ವಿ. ಕತ್ತಿ : ಅವರ ಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು ಪೂರ್ಣ ಮಾಹಿತಿ ಕೊಡಿಸುತ್ತೇನೆ. 100% Clear ಮಾಡುವ ಪ್ರಯತ್ನ ಮಾಡುತ್ತೇನೆ.

ಶ್ರಿ ವೆಂಕಟರಾವ್ ನಾಡಗೌಡ : ಧನ್ಯವಾದಗಳು.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಅಧ್ಯಕ್ಷರು : ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಮಂಡಿಸುವುದು.

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ: 30.03.2012 ರ 5ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 113 ಪ್ರಶ್ನೆಗಳ ಪೈಕಿ 85 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. ಹಾಗೂ ದಿನಾಂಕ: 29.03.2012ರ 4ನೇ ಪಟ್ಟಿಯಿಂದ ಸದನದಲ್ಲಿ